ಬೈಯುವ ರೀತಿಯಲ್ಲೇ ಅವನನ್ನು ಬೈಯುವುದು ನನ್ನ ಧೈರ್ಯ ಅಂದೆನಿಸುತ್ತಿತ್ತು. ಅವನನ್ನು ಹಾಗೆ ಬೈಯುವುದಲ್ಲಿ ನನಗೆ ಸಂತೋಷ ಸಿಗುತ್ತಿತ್ತು, ಎಷ್ಟು ಅಂದರೆ ಆ ಥ್ರಿಲ್ಲಿನಲ್ಲಿ, ಏನು ಬೇಕಾದರಾಗಲಿ, ನನ್ನನ್ನು ಕೊಲ್ಲುವುದಾದರೆ ಕೊಲ್ಲಲಿ, ಮಕ್ಕಳೂ ಸಾಯಲಿ ಎಂದುಕೊಳ್ಳುತ್ತಿದ್ದೆ. ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆ ಮಾಡಿದ್ದೆ. ಆದರೆ ಅದೇಕೋ, ಪ್ರತಿ ಸಲ ಮಕ್ಕಳ ಮುಖ ನನ್ನ ಮುಂದೆ ಬಂದು ನನ್ನನ್ನು ತಡೆಯುತ್ತಿತ್ತು.

ಅವತ್ತು ನಾನು ಕರುಣಾನಿಧಿಯ ಜೊತೆ ಇಲ್ಲಿಗೆ ಬಂದದ್ದು ಅವನ ಒತ್ತಾಯದಿಂದಲೇ. ಅಪ್ಪನ ಬಳಿ ಏನು ಸಂಪತ್ತು ಇದೆ ಎಂದು ಕಾಣುವುದು, ಕಂಡ ಮೇಲೆ 'ಪಾಲು ಕೇಳು' ಎಂದು ನನ್ನನ್ನು ಒತ್ತಾಯಿಸುವುದು ಅವನ ಉದ್ದೇಶವಾಗಿತ್ತು. ಆದರೆ ಸನ್ಮತಿ ಮತ್ತು ಅಮರೇಶನ ವಿಲಕ್ಷಣ ವರ್ತನೆಯಿಂದಾಗಿ ಕರುಣಾನಿಧಿಯ ಉದ್ದೇಶ ಕೈಗೂಡಲಿಲ್ಲ. ಆಗ ನನ್ನ ತಲೆ ನನ್ನ ಸ್ವಾಧೀನ ಇರಲಿಲ್ಲ. ಒಂಥರಾ ಹುಚ್ಚಳೇ ಆಗಿದ್ದೆ. 'ಅಮರೇಶ ಮತ್ತು ಸನ್ಮತಿಯ ಮೇಲೆ ದಾಳಿ ಮಾಡು, ಅವರನ್ನು ಕೊಲ್ಲು' ಎಂದು ನನ್ನ ಮನಸ್ಸು ಹೇಳುತ್ತಿತ್ತು. ನನ್ನನ್ನು ನೀವು ಹುಚ್ಚಾಸ್ಪತ್ರೆಗೆ ಕಳಿಸದಿದ್ದುದು ನನ್ನ ಭಾಗ್ಯ' ಎಂದು ಹೇಳಿ ಸುಕೃತಿ ಮೊಣಕಾಲ ನಡುವೆ ತಲೆಯಿರಿಸಿ ಪುನಃ ಅಳತೊಡಗಿದಳು.

ಲಾಯರ್ ಪಶುಪತಿ ಅಭಿಗೆ ಫೋನು ಮಾಡಿ, 'ಅಮರೇಶ ಮತ್ತು ಸನ್ಮತಿಯನ್ನು ಪೊಲೀಸರು ಪತ್ತೆ ಮಾಡಿ ಬಂಧಿಸಿದ್ದಾರೆ. ಸದ್ಯ ಬೆಂಗಳೂರಿನಲ್ಲಿ ಲಾಕಪ್ಪಿನಲ್ಲಿ ಇದ್ದಾರೆ. ನನ್ನ ಅಪೇಕ್ಷೆಯಂತೆ ಪೊಲೀಸರು ಅಮರೇಶ ಮತ್ತು ಸನ್ಮತಿಯನ್ನು ಬೇರೆ ಬೇರೆ ಕೋಣೆಗಳಲ್ಲಿ ಇರಿಸಿ ಎರಡು ದಿನದಲ್ಲಿ ತಮ್ಮ ಸಂಪೂರ್ಣ ಬಯೊಡೇಟಾ, ಅಂದರೆ, ಅವರ ಕತೆಯನ್ನು ಬರೆದುಕೊಡಲು ಹೇಳಿದ್ದಾರೆ. ಇದೆಂಥಾ ಕ್ರಮ ಎಂದು ಆಶ್ಚರ್ಯಪಡಬೇಡಿ. ನನ್ನ ಪ್ರಕಾರ, ಇದು ಪೊಲೀಸರು ಅಪರಾಧಿಗಳ ಬಾಯಿ ತೆರೆಸುವ ಮೊದಲು, ಅವರು ವಿದ್ಯಾವಂತರಾಗಿದ್ದರೆ ಅವರ ಮನಸ್ಸು ತೆರೆಸುವ ನನ್ನ ಕ್ರಮ. ಅನಂತರ ಪೊಲೀಸರು ಬಾಯ್ತೆರೆಸಿ ಪಡೆದುದಕ್ಕೆ ಅಪರಾಧಿ ಬರೆದು ಕೊಟ್ಟಿರುವುದನ್ನು ಹೋಲಿಸಿ ನೋಡುತ್ತೇನೆ. ಹೀಗೆ ಬರೆದಾಗ ಕೆಲವರಿಗೆ ಪಶ್ಚಾತ್ತಾಪವಾಗಿ, ಮುಂದೆ ಒಳ್ಳೆಯವರಾಗಿ ಬದುಕಬೇಕು ಎಂಬ ಭಾವನೆ ಮೂಡುವುದುಂಟು. ಅಮರೇಶ ಮತ್ತು ಸನ್ಮತಿಯ ಬರಹಗಳು ಇವತ್ತು ನನ್ನ ಕೈಗೆ ಬರುತ್ತವೆ. ನಾಳೆ ನೀವು ನಿಮ್ಮ ಅಪ್ಪನ ಜೊತೆ ಇಲ್ಲಿಗೆ ಬನ್ನಿ. ಅವರ ಕನ್ಫೆಶನ್ ಏನು ಅಂತ ನೀವು ತಿಳಿಯಬೇಕು. ಅವರನ್ನು ಏನು ಮಾಡಬಹುದು ಎಂಬ ಬಗ್ಗೆ ನಿಮ್ಮ ಅಭಿಪ್ರಾಯಕ್ಕೆ ಕೂಡ ನಾವು ಬೆಲೆ ಕೊಡುತ್ತೇವೆ' ಎಂದರು.

ಮರುದಿನ ಅಭಿ ಮತ್ತು ನರಹರಿ ಪಶುಪತಿಯ ಆಫೀಸಿಗೆ ಹೋದರು.

## ಲಾಯರ್ ಪಶುಪತಿ ಬಳಿ ಅಭಿ, ನರಹರಿ

ಪಶುಪತಿ ಹೇಳಿದರು, 'ಜೇಡನಿಂದಲೂ ನೇಯಲಾಗದಂಥ ಒಂದು ಸುಳ್ಳಿನ ಬಲೆಯನ್ನು ಅಮರೇಶ ಮತ್ತು ಸನ್ಮತಿ ನೆಯ್ದಿದ್ದಾರೆ. ಈಗ ಆ ಬಲೆಯಲ್ಲಿ ಅವರೇ ಸಿಕ್ಕಿಬಿದ್ದಿದ್ದಾರೆ. ಸತ್ಯವಾದುದನ್ನು ಹಾಗೇ ಇರಿಸಿ ಅವರಿಬ್ಬರು ಅಮೆರಿಕೆಯಿಂದ ಆನೆಮಹಲಿನವರೆಗೆ ಹೇಳಿದ ಸುಳ್ಳುಗಳನ್ನು ಸತ್ಯಗಳು ಇದ್ದರೆ ಹಾಗೆಯೇ ಇರಲಿ ಎಂದಿದ್ದೇನೆ. ಯಾವುದು ಸುಳ್ಳೋ ಅದರ ಮುಂದೆ ಕಂಸದಲ್ಲಿ (ಸುಳ್ಳು) ಎಂದು ಬರೆಯಲು ಸೂಚಿಸಿದ್ದೇನೆ. ಅವರು ಹಾಗೆಯೇ ಮಾಡಿದ್ದಾರೆ. ಅವರ ಕತೆಯ ತುಂಬಾ 'ಸುಳ್ಳು' ಎನ್ನುವ ಕಂಸಗಳೇ ಇವೆ. ಅಂದರೆ ಅಷ್ಟು ಸತ್ಯ ಹೇಳಿದ್ದಾರೆ ಎಂದರ್ಥವಲ್ಲವೆ?' ಎಂದು ನಕ್ಕು ಪಶುಪತಿ, 'ಅವರ ಇಡೀ ಕತೆಯಲ್ಲಿರುವ ಒಂದೇ ಒಂದು ಸತ್ಯ ಎಂದೆನಿಸುವ ಸಂಗತಿಯೆಂದರೆ, ಸನ್ಮತಿ ಮತ್ತು ಮುರಲಿ ಕೆಲಕಾಲ ಸತಿಪತಿಯರಾಗಿದ್ದುದು ಮಾತ್ರ. ಅಮೆರಿಕೆಯಲ್ಲಿ ಸನ್ಮತಿಯ ಸಾಚಾ ಗಂಡನಾಗಿದ್ದ ಮುರಲಿ ತನ್ನನ್ನು 'ಬಂಜೆ' ಎಂದು ಹಳಿಯುತ್ತಿದ್ದ; ವಾಸ್ತವದಲ್ಲಿ, ತಾನು ದುರ್ಬಲ ವೀರ್ಯ ಎಂದು ಅವನಿಗೆ ತಿಳಿದಿತ್ತು ಎಂದು ಸನ್ಮತಿ ಬರೆದಿದ್ದಾಳೆ. ಕನ್ಫೆಶನಿನ ಕೊನೆಯಲ್ಲಿ ಇಬ್ಬರೂ,'ದಯವಿಟ್ಟು ನಮ್ಮನ್ನು ಕ್ಷಮಿಸಿ' ಎಂದು ಬರೆದಿದ್ದಾರೆ. ಅದರಿಂದ ಅವರಿಗೇನೂ ಲಾಭವಿಲ್ಲ.

'ಅಮರೇಶ ನರಹರಿಯಿಂದ ಬಲಾತ್ಕಾರವಾಗಿ ಸಹಿ ಹಾಕಿಸಿ ತೆಗೆದುಕೊಂಡ ಕಾಗದಗಳು ಪೊಲೀಸರಿಗೆ ಸಿಕ್ಕಿವೆ. ಆದ್ದರಿಂದ ಇಬ್ಬರದೂ ವಿಚಾರಣೆ ನಡೆದೇ ನಡೆಯುತ್ತದೆ. ಖಂಡಿತ ನಾಲ್ಕೈದು ವರ್ಷ ಸೆರೆಮನೆಯಲ್ಲಿ ಇರಬೇಕಾದೀತು. ಅವರ ಕತೆ ಓದಿದರೆ ನಿಮಗೆ ತಿಳಿಯಬಹುದು, ಅವರು ಹಾರ್ಡ್ ಕೋರ್ ಕ್ರಿಮಿನಲ್ಸ್ ಅಲ್ಲ. ಹೆದರುವವರಿದ್ದರೆ ಹೆದರಿಸಿ ಕಿತ್ತುಕೊಳ್ಳುವ ನೈಪುಣ್ಯವುಳ್ಳವರು ಅಷ್ಟೆ. ಸೆರೆಮನೆಯಿಂದ ಹೊರಬಂದ ಮೇಲೆ ಅವರು ಎಲ್ಲಿಯಾದರೂ ದೂರ ಹೋದಾರು. ಆದ್ದರಿಂದ ಅವರ ಬಗ್ಗೆ ಚಿಂತಿಸಬೇಡಿ' ಎಂದರು. ಅವರ ಚರಿತ್ರೆಯ ಹಿಂದಿನ ಮುಖ್ಯ ಅಂಶಗಳೆಂದರೆ, ಅವರ ಪೂರ್ವ ಕತೆ. ಅಮರೇಶ ತಮಿಳ್ನಾಡಿನವನು. ಆರನೇ ತರಗತಿ ಓದುತ್ತಿದ್ದಾಗ ಏನೋ ಒಂದು ಕಳ್ಳತನ ಮಾಡಿ ಬೆಂಗಳೂರಿಗೆ ಓಡಿ ಬಂದು ಒಂದು ಹೋಟೆಲಿನಲ್ಲಿ ಕೆಲಸಕ್ಕೆ ಸೇರಿಕೊಂಡು ಸಂಜೆ ಶಾಲೆಯಲ್ಲಿ ಓದಿ ಎಸ್ಸೆಸ್ಸೆಲ್ಸಿ ಮಾಡಿಕೊಂಡ. ಬಹಳ ಬುದ್ಧಿವಂತ, ಅಷ್ಟೇ ಚುರುಕು. ಬೆಂಗಳೂರಿನಲ್ಲಿ ಒಂದು ಫೈವ್ ಸ್ಟಾರ್ ಹೋಟೆಲಿನಲ್ಲಿ ಚೆಫ್ ಆದ. ಎಕ್ಸ್‌ಪರ್ಟ್ ಚೆಫ್ ಎಂದು ಖ್ಯಾತಿ ಗಳಿಸಿದ. ಅಲ್ಲಿಂದ ಯಾರದೋ ನೆರವಿನಿಂದ ಅಮೆರಿಕೆಗೆ ಹೋದ. ಅಲ್ಲಿ ಕೂಡ ಚೆಫ್ ಆಗಿದ್ದ. ಅಲ್ಲಿ ಅವನಿಗೆ ಸನ್ಮತಿಯ ಪರಿಚಯ ಆಯಿತು. ಮುರಲಿಯ ಜೊತೆ ಅವಳ ಡೈವೋರ್ಸ್ ಆದ ಮೇಲೆ ಅಮರೇಶ ಮತ್ತು ಸನ್ಮತಿ 'ಲಿವಿಂಗ್ ಟುಗೆದರ್ ಜೋಡಿ' ಆದರು. ಮಕ್ಕಳಿಲ್ಲ. ಹೇಗೋ ನರಹರಿ ಮತ್ತು ಅವರ ಹೆಂಡತಿ ಶಾಲ್ಮಲಿಯಿಂದ ಸನ್ಮತಿ ಪಡೆದ ಮಾಹಿತಿಯನ್ನು ಬಂಡವಾಳ ಮಾಡಿಕೊಂಡು ಇಬ್ಬರೂ ಆನೆಮಹಲಿನಲ್ಲಿ ತಳವೂರಿದರು.

## ಇಲ್ಲಿಯವರೆಗೆ



ಆನೆಮಹಲಿಗೆ ಬಂದಿದ್ದ ನರಹರಿಯ ಗುರು ಸೂರ್ಯಕಾಂತ ರಾನಡೆಗೆ ನರಹರಿ ಹಾರ್ಟ್ ಅಟ್ಯಾಕ್‌ನಿಂದ ಸತ್ತಿರುವುದಾಗಿ ಹೇಳುತ್ತಾರೆ. ಇದು ಸುಳ್ಳು ಎಂದು ರಾನಡೆಗೆ ಅರಿವಾಗುತ್ತದೆ.

ಇತ್ತ ಅಭಿ ತನ್ನ ತಂದೆ ನರಹರಿ ಜತೆಗೆ ಉತ್ತರಭಾರತದಿಂದ ಸೀದಾ ಆನೆಮಹಲಿಗೆ ಬರುತ್ತಾರೆ. ಅಲ್ಲಿಂದ ಸಕಲೇಶಪುರದ ಹೋಟೆಲ್ ರೂಮಿನಲ್ಲಿ ತಂಗುತ್ತಾರೆ. ಆಗ ಅಭಿಗೆ ಸುಕೃತಿಯನ್ನು ನೋಡಬೇಕೆನಿಸುತ್ತದೆ. ಆಕೆಗೆ ಫೋನ್ ಮಾಡಿದಾಗ ಸುಕೃತಿ ಚೆನ್ನೈಯಲ್ಲಿ ಇರುವುದು ತಿಳಿಯುತ್ತದೆ. ಅಲ್ಲಿಗೆ ಹೋಗಿ ಸುಕೃತಿ, ಆಕೆಯ ಮಕ್ಕಳಾದ ಶಮಿ ಮತ್ತು ಕಾಂತಿಯನ್ನು ಸಕಲೇಶಪುರಕ್ಕೆ ಕರೆದುಕೊಂಡು ಬರುವ ಯೋಚನೆ ಮಾಡುತ್ತಾನೆ ಅಭಿ. ಹಾಗೆ ಚೆನ್ನೈಗೆ ಹೋದಾಗ ಸುಕೃತಿ ಆಕೆಯ ಗಂಡ ಕರುಣಾನಿಧಿ ಹಣಕ್ಕಾಗಿ ನೀಡಿದ ಕಿರುಕುಳ, ಇದರಿಂದ ಬೇಸತ್ತು ಆತ್ಮಹತ್ಯೆಗೆ ಮುಂದಾದದ್ದು ಮುಂತಾದ ವಿಚಾರಗಳನ್ನು ಅಭಿಗೆ ತಿಳಿಸುತ್ತಾಳೆ. ಅಲ್ಲಿಂದ ಸಕಲೇಶಪುರಕ್ಕೆ ಬರುತ್ತಾರೆ. ತಂದೆ ನರಹರಿಯನ್ನು ನೋಡಿದ ಕೂಡಲೇ ಸುಕೃತಿಗೆ ದುಃಖದ ಕಟ್ಟೆ ಒಡೆಯುತ್ತದೆ. ಅಲ್ಲಿಂದ ಸುಕೃತಿ, ಮಕ್ಕಳನ್ನು ಬಿಟ್ಟು ಅಭಿ–ನರಹರಿ ಬೆಂಗಳೂರಿಗೆ ಬರುತ್ತಾರೆ. ಜತೆಗೆ ಚೆನ್ನೈಯಲ್ಲಿರುವ ಸುಕೃತಿಯ ಮನೆ, ಕಾರು ಮಾರಾಟಕ್ಕೆ ದಲ್ಲಾಳಿಗಳ ಮೂಲಕ ಪ್ರಯತ್ನಿಸುತ್ತಾರೆ.